ಮಧುಮತಿ ಎಸ್.ಎ. ಚಿತ್ರದುರ್ಗ

ಪ್ರೀತಿ ಪ್ರೇಮಕ್ಕೆ ಕಾಣಿಕೆಯ ಅವಶ್ಯಕತೆ ಇದೆಯೆ?



ನಗೆಹೂವ ಕಾಣಿಕೆ, ಅನುರಾಗ ಮಾಲಿಕೆಗಳು ಅವಶ್ಯ.

ಬಿ.ಆರ್. ಉಷಾ, ಬೆಂಗಳೂರು

ಆದಿಮಾನವನಿಗೂ, ನಾಗರಿಕನಿಗೂ ವ್ಯತ್ಯಾಸವೇನು?

ಅವನು ಹಸಿವಾದಾಗ ಮಾತ್ರ ಬೇಟೆಯಾಡುತ್ತಿದ್ದ.

ಪಿ. ಜಯವಂತ ಪೈ, ಕುಂದಾಪುರ

ಕಲ್ಲೇಟಿಗೂ, ಕಣ್ಣೇಟಿಗೂ ವ್ಯತ್ಯಾಸವೇನು?

ಒಂದರಿಂದ ರಕ್ತ; ಇನ್ನೊಂದರಿಂದ ಅನುರಕ್ತ.

ಪೂರ್ಣಿಮಾ ಮೂರ್ತಿ, ಬೆಂಗಳೂರು

ಮರಣೋತ್ತರ ಪ್ರಶಸ್ತಿಗಳನ್ನು ವ್ಯಕ್ತಿ ಜೀವಂತವಾಗಿರುವಾಗಲೇ ನೀಡಬಹುದಲ್ಲವೆ?

ಆಹಾ! ಇದು ಇರುವಾಗಲೇ ಪೋಸ್ಟ್ ಮಾರ್ಟಂ ರಿಪೋರ್ಟ್ ನೀಡಿರಿ ಎಂದಂತಾಯ್ತು.

ಶೃತಿ ರಿಗ್ರೆಟ್ ಐಯ್ಯರ್, ನ್ಯೂಜರ್ಸಿ

'ನಾರದ'ರ ದೈನಂದಿನ ಕಾರ್ಯಕ್ರಮ ಹೇಗಿದೆ?



ಕೊಂಚವೂ ನಾರದಂತೆ ಅಷ್ಟೇ ಫ್ರೆಶ್ ಆಗಿದೆ.

ಮೃತ್ಯುಂಜಯಪ್ಪ, ಚಿತ್ರದುರ್ಗ

ದಾವಣಿಗಳು ಕಾಣೆಯಾದವು; ಬಳೆಗಾರ ಕಳೆದುಹೋದ; ನೊಸಲು ಬಟ್ಟಬಯಲಾಯಿತು. ಹೆಣ್ಣು, ಸಂಸ್ಕೃತಿ ಮುಂದೇನು?

ವಿದ್ಯೆಯ ದಾವಣಿ, ಆತ್ಮಸ್ಥೈರ್ಯದ ಬಳೆ, ಸ್ವಾವಲಂಬನೆಯ ಸಂಸ್ಕೃತಿಯಿಂದ ರಾರಾಜಿಸತ್ತದೆ.

ಶಾಂತ ಡಿ. ಗೌಡ, ಬೆಂಗಳೂರು

ಕೊಲ್ಲುವ ದೇವರು ಹೆಚ್ಚೊ, ಕಾಯುವ ದೇವರು ಹೆಚ್ಚೊ?

ಎರಡು ದೇವರ ಹೆಸರೂ ಶುರುವಾಗುವುದೇ ಎಚ್‌ನಿಂದ ಸ್ಥಿತಿಕರ್ತ ಹರ; ಲಯಕರ್ತ ಹರಿ!

ಮಲ್ಲಿಕಾರ್ಜುನ, ಸುರಧೇನುಪುರ

ಹಾಕಿದ ಗೆರೆ ದಾಟದ ಗಂಡು ಬೇಕೆನ್ನುವ ಕನ್ಯೆಗೆ ನಿಮ್ಮ ಸಲಹೆ?

ದಡ್ಡರು ನಿಷೇಧದ ಗೆರೆ ಬಳಸುತ್ತಾರೆ; ಜಾಣರು ಪ್ರೀತಿಯ ಕರೆ ಬಳಸುತ್ತಾರೆ.

ಕಾವ್ಯಶ್ರೀ ಪತ್ರಿಮಠ, ಶೋರಾಪುರ

ಜ್ಞಾನಿಗಳು ಹೆಚ್ಚು ಮೌನಿಗಳಾಗಿರುತ್ತಾರಲ್ಲಾ, ಏಕೆ?

ದಡ್ಡರಿಗೆ ಅರ್ಥವಾಗಲ್ಲ, ಜಾಣರಿಗೆ ಹೇಳಬೇಕಿಲ್ಲವಾದ್ದರಿಂದ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಗಂಡು ಇನ್‌ಕಮಿಂಗ್ ಕಾಲ್; ಹೆಣ್ಣು ಔಟ್‌ಗೋಯಿಂಗ್ ಕಾಲ್. ಮದುವೆ?

ಕರೆನ್ಸಿ.

ವಿ. ಹಮೀದ್, ವಿಟ್ಲ

ಸಂಸಾರಿಗೂ, ಬ್ರಹ್ಮಚಾರಿಗೂ ಇರುವ ವ್ಯತ್ಯಾಸವೇನು?

ಸಂಸಾರಿ 'ಸಾರಿ' ಹೇಳುವ ಪರಿಸ್ಥಿತಿಗಳು ಹೆಚ್ಚು.

ಕೆ.ಎಂ. ವಿಭೂತಿ, ಹರಿಹರ

ರಾಜಕೀಯ ನಾಯಕರು ಕೆಲವೊಮ್ಮೆ ನಾಲಾಯಕ್ ರೀತಿಯಲ್ಲಿ ನಡೆದುಕೊಳ್ಳುವುದೇಕೆ?

ಕೊಂಚ ಮೈಮರೆತಾಗ ಸಹಜ ಸ್ವಭಾವ ಮೂಡಿಬಿಡುವುದರಿಂದ.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ

ಸಾಧಿಸುವವರಿಗೆ ಎಷ್ಟೊಂದು ಶೋಧನೆಗಳಲ್ವಾ?

ಸಕ್ಕರೆನೀರು ಪಾಕವಾಗಬೇಕಾದರೆ ಬಿಸಿ ಮುಟ್ಟಲೇಬೇಕು.

ಮೋಹನರಾಜು ಎಸ್.ಎ. ಶಂಕರಘಟ್ಟ

ವಿನಾಶಕಾಲೇ ವಿಪರೀತ ಬುದ್ಧಿ; ಚುನಾವಣಾ ಕಾಲೇ?

ವಿಪರೀತ ರದ್ದಿ.

ನರಸಿಂಹ ಪೈ, ಕಾಸರಕೋಡ

ಅಲಂಕಾರಕ್ಕೂ, ಅಹಂಕಾರಕ್ಕೂ ಏನು ವ್ಯತ್ಯಾಸ?

ಇದು ಇಷ್ಟ ಪ್ರಕಾರ; ಅದು ದುಷ್ಟ ಪ್ರಕಾರ.

## ವಾರದ ಪ್ರಶ್ನೆ

ಟಿ.ಎಂ. ಮಾನಪ್ಪ, ಶಿವಮೊಗ್ಗ

ದೇಶಾಭಿಮಾನ ಎಂದು ಭಾಷಣ ಹೊಡೆಯುವ ರಾಜಕಾರಣಿಗಳು ತಮ್ಮ ಮಕ್ಕಳನ್ನೇಕೆ ಸೈನ್ಯಕ್ಕೆ ಸೇರಿಸುವುದಿಲ್ಲ?

ಅಲ್ಲಿ ಶಿಸ್ತು ಪಾಲಿಸಬೇಕಲ್ಲ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

ಬಹುತೇಕ ಕುಟುಂಬಗಳಲ್ಲಿ ಕೊನೆಯಲ್ಲಿ ಹುಟ್ಟಿದವಳೇ ತುಂಬಾ ಸುಂದರಿಯಾಗಿರಲು ಕಾರಣ?

ಫ್ರಿಂಟ್ ನಿಯಮ; ಫೈನಲ್ ಕಾಪಿ ಎಲ್ಲ ದೋಷಗಳಿಂದು ಮುಕ್ತವಾಗಿರುತ್ತದೆ.

ಎನ್.ವಿ. ಶ್ರೀನಿವಾಸ್, ಮೈಸೂರು

ಮನಸ್ಸಿದ್ದರೆ ಮಾರ್ಗ; ಮನಸ್ಸಿಲ್ಲದಿದ್ದರೆ?

ಜಿಪಿಎಸ್ ಆನ್ ಮಾಡಿ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ಚಿಕ್ಕಮಕ್ಕಳನ್ನು ದೇವರ ರೂಪದಲ್ಲಿ ಕಾಣಬೇಕಂತೆ. ಹೌದೇ ಸಾರ್?



ಅದಕ್ಕೇ ಮಕ್ಕಳಿಗೆ 'ಸದ್ದು ಮಾಡಬೇಡ!'; 'ಅಲ್ಲಾಡದೆ ಕೂತಿರು' ಎಂದೆಲ್ಲ ಹೇಳುವುದು.

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು

ನಮ್ಮ ಕೃತಿಗಳೇ ಮಾತನಾಡುವಂತಿದ್ದರೆ?

ಅವನ್ನು ಆಡಿಯೋ ಬುಕ್ಸ್ ಎಂದು ಕರೆಯುತ್ತಾರೆ.

ರಾಜೀವ್ ಎಸ್. ಮಾಗಲ್, ಸಕಲೇಶಪುರ

ಒಲವಿನ ಮಡದಿ ಯೂಟ್ಯೂಬ್ ನೋಡಿ ಮಾಡಿದ ಚಟ್ನಿಗೆ ಯಾವ ರೀತಿ ಮೆಚ್ಚುಗೆ ವ್ಯಕ್ತಪಡಿಸಿದರೆ ಕ್ಷೇಮ?

ಎಫ್‌ಬಿ, ಟ್ವಿಟರ್‌ಗಳಲ್ಲಿ ಚಟ್ನಿಯ ಫೋಟೊ ಹಾಕಿ 'ಯಮ್ಮಿ' ಎಂದು ಬರೆಯಿರಿ.

■ ರಾಮ್